# ಸ್ವರತಾನ ಸಾರ್ವಭೌಮ



## ಸ್ವರಗಳ ಮರೆಗೆ ಉಸ್ತಾದ್ ರಶೀದ್ ಖಾನ್

**ಹಿಂದೂಸ್ತಾನಿ ಸಂಗೀತದ ಅದ್ಭುತ ಗಾಯಕ ಉಸ್ತಾದ್ ರಶೀದ್ ಖಾನ್‌ ವೇಗದ ತಾನ್‌ಗಳಿಂದ ಕೇಳುಗರನ್ನು ಮಂತ್ರಮುಗ್ಧಗೊಳಿಸುತ್ತಿದ್ದ ಈ ಸ್ವರ ಸಾಮ್ರಾಟ, ಜೀವನವನ್ನೂ ತ್ವರಿತವಾಗಿಯೇ ಮುಗಿಸಿದ್ದಾರೆ.**

**ಉಮಾ ಅನಂತ್**

ವ್ಯಾಸರಾಯರು ಬರೆದ ಸುಪ್ರಸಿದ್ಧ ‘ಕೃಷ್ಣಾ ನೀ ಬೇಗನೆ ಬಾರೊ’ ಕೃತಿಯನ್ನು ಹಾಡಿ ರಂಜಿಸದ ಕಲಾವಿದರೇ ಇಲ್ಲ. ಈ ಜನಪ್ರಿಯ ಹಾಡನ್ನು ‘ಯಮನ್ ಕಲ್ಯಾಣ್’ ರಾಗದಲ್ಲಿ ಉಸ್ತಾದ್ ರಶೀದ್ ಖಾನ್, ಹರಿಹರನ್ ಜೊತೆಗೆ ಸೇರಿ ಮಧುರಾತಿಮಧುರವಾಗಿ ಹಾಡಿದ್ದು ಅತ್ಯಂತ ಜನಪ್ರಿಯವಾಗಿದೆ.

ಹಿಂದೂಸ್ತಾನಿ ಗಾಯನವನ್ನು ಹಿತಮಿತವಾದ ಆಲಾಪ, ಮಂದ್ರ, ಮಧ್ಯ, ತಾರಕ ಸ್ಥಾಯಿಗಳಲ್ಲಿ ಲೀಲಾಜಾಲವಾಗಿ ಪ್ರಸ್ತುತಪಡಿಸುತ್ತಿದ್ದ ರೀತಿ ಬೇರೆ ಕಲಾವಿದರಿಗೆ ಹೋಲಿಸಲು ಅಸಾಧ್ಯ ಎನಿಸುವಷ್ಟು ವಿಶಿಷ್ಟ. ಖಯಾಲ್‌ಗಳು, ತರಾನ, ಠುಮ್ರಿ, ಗಜಲ್‌ಗಳೆಲ್ಲವೂ ಸಂಗೀತ ರಸಿಕರನ್ನು ಬೇರೆಯೇ ಲೋಕಕ್ಕೆ ಕೊಂಡೊಯ್ಯುತ್ತಿದ್ದವು. ರಶೀದ್ ಖಾನ್ ಅವರಿಗೆ ಮೂವತ್ತು ವರ್ಷ ಇರುವಾಗಲೇ ಇವರ ಗಾಯನವನ್ನು ಆಲಿಸಿದ ಪಂ. ಭೀಮಸೇನ ಜೋಶಿ ಅವರು ‘ಭಾರತೀಯ ಸಂಗೀತದ ಭವಿಷ್ಯದ ಭರವಸೆ’ ಎಂದು ಬೆನ್ನುತಟ್ಟಿದ್ದು, ರಶೀದ್ ಅವರಿಗೆ ಮಾತ್ರವೇ ದೊರೆತ ಬಹುದೊಡ್ಡ ಪ್ರಶಂಸೆ ಎನ್ನಬಹುದು.

ಉತ್ತರ ಪ್ರದೇಶದ ಬದಯೂನ್‌ನಲ್ಲಿ 1968ರ ಜುಲೈ 1ರಂದು ಜನಿಸಿದ ರಶೀದ್ ಖಾನ್, ಸಂಗೀತಾಭ್ಯಾಸವನ್ನು ತಾತ ಉಸ್ತಾದ್ ನಿಸಾರ್ ಹುಸೇನ್ ಖಾನ್ ಅವರಲ್ಲಿ ಆರಂಭಿಸಿದರು. ಏಪ್ರಿಲ್ 1980ರಲ್ಲಿ ತನ್ನ ಅಜ್ಜನೊಂದಿಗೆ 10ನೇ ವಯಸ್ಸಿನಲ್ಲಿ ಕೋಲ್ಕತ್ತಾಗೆ ತೆರಳಿದರು. ಹನ್ನೊಂದನೇ ವಯಸ್ಸಿಗೇ ಕಛೇರಿ ಕೊಡಲಾರಂಭಿಸಿದರು. ಮನೆತನವೇ ಸಂಗೀತವಾದ್ದರಿಂದ ಗಾಯನದಲ್ಲಿ ಬೇಗ ಯಶ ಸಾಧಿಸಲು ಸಹಾಯವಾಯಿತು. ಇಪ್ಪತ್ತು ವರ್ಷವಾಗುವ ಹೊತ್ತಿಗೆ ದೇಶ ವಿದೇಶಗಳಿಂದ ಪ್ರತಿಷ್ಠಿತ ವೇದಿಕೆಗಳಲ್ಲಿ ಹಾಡುವ ಅವಕಾಶಗಳು ಬರತೊಡಗಿದವು. ಹಿಂದೂಸ್ತಾನಿ ಗಾಯನದಲ್ಲಿ ತಮ್ಮ ಛಾಪನ್ನು ಮೂಡಿಸುತ್ತಿರುವಾಗಲೇ ಬಾಲಿವುಡ್ ಹಿನ್ನೆಲೆ ಗಾಯನಕ್ಕೆ ಒಡ್ಡಿಕೊಳ್ಳುವಂತಾಯಿತು. ಹಿನ್ನೆಲೆ ಗಾಯನದಲ್ಲೂ ಪಾರಮ್ಯ ಮೆರೆದರು. ಬಾಲಿವುಡ್ ಸಿನಿಮಾಗಳಾದ ‘ಇಸಾಕ್, ಮೌಸಮ್, ಬಾಪಿ ಬಾರಿ ಜಾ, ಮೈ ನೇಮ್ ಈಸ್ ಖಾನ್, ಜಬ್ ವಿ ಮೆಟ್...’ ಗಳಲ್ಲಿ ಇವರ ಸುಮಧುರ ಗಾಯನ ಸಿನಿಪ್ರಿಯರ ಮನಗೆದ್ದಿದೆ.

ರಾಂಪುರ್ ಸಹಸ್ವಾನ್ ಘರಾಣೆಯಲ್ಲಿ ಹಾಡುತ್ತಿದ್ದ ಉಸ್ತಾದ್ ಅವರ ‘ಗಾಯಕಿ’ಯ ವಿದ್ವತ್ ಅನಾವರಣವಾಗುವುದು ಸ್ವರಮಂಡಲ ಹಿಡಿದು ಧ್ಯಾನಸ್ಥನಾಗಿ ಸುಲಲಿತ ಆಲಾಪ, ತಾನ್‌ಗಳನ್ನು ಪ್ರಸ್ತುತಪಡಿಸಿದಾಗಲೇ. 38ನೇ ವಯಸ್ಸಿಗೇ ‘ಪದ್ಮಶ್ರೀ’ ಪ್ರಶಸ್ತಿಗೆ ಭಾಜನರಾದ ಅಪರೂಪದ ಈ ಸಾಧಕ, ಪ್ರಹರ (ಆಯಾಯ ಸಮಯಕ್ಕೆ ತಕ್ಕಂತೆ ಹಾಡುವ ರಾಗಗಳು) ರಾಗಗಳ ಬಗ್ಗೆ ಬಹಳ ನಂಬಿಕೆ ಇಟ್ಟಿದ್ದರು. ಈ ಸಿದ್ಧಾಂತವನ್ನು ಗಾಢವಾಗಿ ಪಾಲಿಸುತ್ತಲೂ ಬಂದವರು. ಹಲವಾರು ಬಂದೀಶ್‌ಗಳನ್ನು ಸ್ವತಃ ರಚಿಸಿದ್ದರೂ, ಹಾಡುವಾಗ ಇದು ತನ್ನದೇ ರಚನೆ ಎಂದು ಎಲ್ಲಿಯೂ ಹೇಳಿಕೊಳ್ಳುತ್ತಿರಲಿಲ್ಲ.